(ii) Notification No. RD 86 EST 74 dated 1st/6th February 1978 as required by Section 194 of the Karnataka Land Revenue Act, 1964.

(iii) Notification No. RD 35 EST 77 dated 10th February, 1978 regarding remission of duties chargeable under the Karnataka Stamp Act 1957 in respect of deeds executed by persons eligible for loan or assistance under differential rate of interest approved by Government of India.

MR. SPEAKER.—The Papers are laid on the Table.

## Karnataka Rent Control (Amendment) Bill, 1978

### Introduction

SRI B. BASAVALINGAPPA (Minister for Revenue).—I beg to move:

"That leave be granted to introduce the Karnataka Rent Control (Amendment) Bill, 1978.

MR. SPEAKER.— The question is :

"That leave be granted to introduce the Karnataka Rent Control (Amendment) Bill, 1978.

*The motion was adopted and leave was granted*

SRI B. BASAVALINGAPPA (Minister for Revenue)—I beg to introduce

"The Karnataka Rent Control (Amendment) Bill, 1978."

MR. SPEAKER.– The Bill is introduced. **

### Notice of an Adjournment Motion :

*Re : affairs of the final M. A. Economics Students of the Bangalore University and the alleged mal-practices.*

† ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).—ಸ್ವಾಮಿ, ಬೆಂಗಳೂರು ಯೂನಿವರ್ಸಿಟಿ ಸಿಂಡಿಕೇಟ್ ಮತ್ತು ಆಕೆಡೆಮಿಕ್ ಕೌನ್ಸಿಲ್‌ನ ತೀರ್ಮಾನದ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ನಾನು ಕಳುಹಿಸಿದ್ದೆ. ಅದು ಏನಾಯಿತು ಎಂಬುದನ್ನು ತಿಳಿಸುತ್ತೀರಾ ?

ಮಾನ್ಯ ಅಧ್ಯಕ್ಷರೇ, ನಾನು ಕಳುಹಿಸಿರುವ ನಿಲುವಳಿ ಸೂಚನೆ ಬಹಳ ಮುಖ್ಯವಾದುದು. ಏಕೆಂದರೆ ಬೆಂಗಳೂರು ಯೂನಿವರ್ಸಿಟಿಯ ಫೈನಲ ಎಂ.ಎ., (ಎಕನಾಮಿಕ್ಸ್) ವಿಷಯದಲ್ಲಿ ನಡೆದಿದ್ದ ಮಾಲ್ ಪ್ರಾಕ್ಟೀಸ್ ಆರೋಪಕ್ಕೆ ಒಳಗಾಗಿದ್ದ ೭ ಜನ ವಿದ್ಯಾರ್ಥಿಗಳ ವಿರುದ್ಧ ಎಕ್ಸ್‌ಪರ್ಟ್ಸ್ ಕಮಿಟಿ ಯವರು ಕೊಟ್ಟಿದ್ದ ವರದಿಯನ್ನು ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ನವರು ವಿರೋಧಿಸಿದ್ದರಿಂದ ಅಲ್ಲಿನ ಪರಿಸ್ಥಿತಿ ಬಹಳ ಪ್ರಕ್ಷುಬ್ಧವಾಗಿದೆ. ಈಗ ಪರೀಕ್ಷೆ ಹತ್ತಿರ ಬರುತ್ತಿದೆ, ವಿದ್ಯಾರ್ಥಿಗಳಲ್ಲೂ ಕೂಡ ಜಿಜ್ಞಾಸೆ

---

* * Bill appended as annexure to this volume.

ಉಂಟಾಗಿದೆ. ಇವತ್ತು ಈ ಸಿಂಡಿಕೇಟ್‌ನವರು ಏನೊಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ ಇದು ವಿಶ್ವವಿದ್ಯಾನಿಲಯಕ್ಕೇ ಅಲ್ಲದೆ ಸರ್ಕಾರದ ಮುಖಕ್ಕೂ ಕೂಡ ಮಸಿ ಬಳಿಯುವ ಕೆಲಸವಾಗಿದೆ. ಈ ಸಿಂಡಿಕೇಟ್‌ನವರು ತೆಗೆದುಕೊಂಡಿರುವ ತೀರ್ಮಾನವನ್ನು ಜಗತ್ತಿನ ಯಾವ ವಿಶ್ವವಿದ್ಯಾನಿಲಯದಲ್ಲೂ ಎಂಥ ಮೂರ್ಖರೂ ಇದುವರೆಗೂ ತೆಗೆದುಕೊಂಡಿಲ್ಲ. ಈ ಆಪಾದನೆಗೆ ಒಳಗಾಗಿರುವ ವಿದ್ಯಾರ್ಥಿಗಳು ಸುಮಾರು ೭೦-೮೦ ಅಡಿಷನಲ್ ಷೀಟ್ಸ್‌ನ್ನು ತೆಗೆದುಕೊಂಡು ಬರೆದಿದ್ದಾರೆ. ಈ ರೀತಿ ಉಪಯೋಗಿಸಿರುವ ಷೀಟ್ಸ್‌ನಲ್ಲಿ ಕೂಡ ವ್ಯತ್ಯಾಸ ಇದೆ. ಮತ್ತು ಕೇವಲ ೩ ಗಂಟೆಗಳಲ್ಲಿ ಇಷ್ಟೊಂದು ಉತ್ತರವನ್ನೂ ಕೂಡ ಬರೆಯುವುದಕ್ಕಾಗುವುದಿಲ್ಲ. ಈ ಮಾಲ್ ಪ್ರಾಕ್ಟೀಸ್ ೧೯೭೪ರಲ್ಲಿ ನಡೆಯಿತು, ೧೯೭೬ರಲ್ಲಿ ಹಾ. ರೂಬೆನ್ ಕಮಿಟಿಯವರು ಒಂದು ರಿಪೋರ್ಟ್ ಕೊಟ್ಟರು. ಈಗ ನಾವು ೧೯೭೮ನೇ ವರ್ಷದಲ್ಲಿದ್ದೇವೆ ಈಗಾಗಲೇ ನಮ್ಮ ಬೆಂಗಳೂರು ವಿಶ್ವವಿದ್ಯಾನಿಲಯದ ಕೀರ್ತಿ ಕಡಿಮೆಯಾಗಿದೆ. ನಾವು ಈ ವಿಶ್ವವಿದ್ಯಾನಿಲಯವನ್ನು ಫೆಡರಲ್ ಯೂನಿವರ್ಸಿಟಿ ಮಾಡಬೇಕೆಂದು ಹೇಳತಕ್ಕ ಕಾಲದಲ್ಲಿ ಈ ಸಿಂಡಿಕೇಟ್‌ನವರು ತೆಗೆದುಕೊಂಡಿರುವ ತೀರ್ಮಾನದಿಂದ ರಾಜ್ಯದಲ್ಲಿ ಅಶಾಂತಿಯುಂಟಾಗುತ್ತಿದೆ. ಆದುದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಈ ಯೂನಿವರ್ಸಿಟಿಯಲ್ಲಿ ಸರ್ಕಾರದ ಪರವಾಗಿ ಇರತಕ್ಕ ಪ್ರತಿನಿಧಿಗಳನ್ನು ವಾಪಸ್ಸು ಕರೆಸಿಕೊಂಡು, ಸಿಂಡಿಕೇಟ್‌ನವರು ಸರ್ಕಾರದ ಮುಖಕ್ಕೆ ಮಸಿ ಬಳಿಯತಕ್ಕ ತೀರ್ಮಾನವನ್ನು ಏನು ತೆಗೆದುಕೊಂಡಿದ್ದಾರೆ ಅದನ್ನು ರದ್ದು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ.

† ಶ್ರೀ ಮಳ್ಳೂರು ಆನಂದರಾವ್.—ಸನ್ಮಾನ್ಯ ಅಧ್ಯಕ್ಷರೇ, ಈವತ್ತಿನ ದಿವಸ ಬೆಂಗಳೂರು ಯೂನಿವರ್ಸಿಟಿಯ ಬಗ್ಗೆ ಏನು ಒಂದು ಪರಿಸ್ಥಿತಿ ನಿರ್ಮಾಣವಾಗಿದೆ, ಅದು ಒಂದು ಗಂಭೀರವಾದಂಥ ಪರಿಸ್ಥಿತಿಯಾಗಿರುತ್ತದೆ, ತುರ್ತಾಗಿರತಕ್ಕಂಥ ಪರಿಸ್ಥಿತಿಯಾಗಿದೆ. ಮಾನ್ಯ ಮಿತ್ರರಾದಂಥ ಶ್ರೀ ರಾಮು ಓವರವರು ಕಳುಹಿಸಿರತಕ್ಕಂಥ ಆಡ್ಜರ್ನಮೆಂಟ್ ಮೋಷನ್ ಲಘುವಾಗಿ ಕಂಡುಬಂದರೂ ಕೂಡ ಈವತ್ತು ಅದು ವಿಶ್ವವಿದ್ಯಾನಿಲಯದ ಕೀರ್ತಿಗೆ ಧಕ್ಕೆತರತಕ್ಕಂಥ ಘಟನೆಯಾಗಿರುತ್ತದೆ. ವಿದ್ಯಾರ್ಥಿಗಳನ್ನು ಹತ್ತಿಕ್ಕತಕ್ಕಂಥ ವಾತಾವರಣ ಅಲ್ಲಿ ಉಂಟಾಗಿರುತ್ತದೆ. ಪರೀಕ್ಷೆಗಳಲ್ಲಿ ಕಾಪಿಯನ್ನು ಮಾಡುವುದು ಇರಲಿ ಅದಕ್ಕಿಂತ ಮಿಗಿಹೋಗಿ ಉತ್ತರಗಳನ್ನು ಮನೆಯಲ್ಲಿಯೇ ಬರೆದು ಅದನ್ನು ಲಗತ್ತಿಸಿಕಳುಹಿಸಿರತಕ್ಕಂಥ ಪ್ರಸಂಗವು ನಡೆದಿರುತ್ತದೆ. ೧೯೭೪ರಲ್ಲಿ ಇದರ ಬಗ್ಗೆ ವಿಚಾರಣೆಯನ್ನು ಮಾಡಿ ಶಿಕ್ಷೆಯನ್ನು ಕೊಡುತ್ತೇವೆಂದು ಕಮಿಟಿಯವರು ಹೇಳಿದ್ದರು ಆದರೆ ಈಗ ೧೯೭೮ರಲ್ಲಿ ಅವರು ಮಾಡಿರುವ ಕೃತ್ಯ ಸರಿಯೆಂದು ಬೆಂಗಳೂರು ಯೂನಿವರ್ಸಿಟಿಯವರು ತೆಗೆದುಕೊಂಡಿರುವ ತೀರ್ಮಾನದಬಗ್ಗೆ ವಿದ್ಯಾರ್ಥಿ ಮುಖಂಡರುಗಳು ಇದೊಂದು ಆಹಿತಕರವಾದ ಘಟನೆಯಾಗಿರುತ್ತದೆ. ಇದಕ್ಕೆ ಬೆಂಬಲ ಕೊಡಬಾರದೆಂದು ಮುಂದೆ ಬಂದು ಹೇಳುತ್ತಿದ್ದಾರೆ. ಇದರಿಂದ ಬೆಂಗಳೂರು ಯೂನಿವರ್ಸಿಟಿಯ ಕೀರ್ತಿಗೆ ಧಕ್ಕೆಯುಂಟಾಗುತ್ತದೆಂದೂ ಕೂಡ ಹೇಳುತ್ತಿರುತ್ತಾರೆ ಉತ್ತರಗಳನ್ನು ಮನೆಯಲ್ಲಿ ಬರೆದು ಉತ್ತರ ಪತ್ರಿಕೆಗಳಲ್ಲಿ ಸೇರಿಸಿ ಕೊಟ್ಟಿರುವಂಥವರಿಗೆ ಡಿಗ್ರಿಯನ್ನು ಕೊಡಬೇಡಿ. ಈರೀತಿ ಡಿಗ್ರಿಯನ್ನು ಕೊಟ್ಟಿದ್ದೇ ಆದರೆ ವಿಶ್ವವಿದ್ಯಾನಿಲಯದ ಡಿಗ್ರಿಯಗತಿಯೇನು ? ಡಿಗ್ರಿಗೆ ಬೆಲೆ ಏನು ಇರುತ್ತದೆ ? ಅದು ಅಲ್ಲದೆ ಎರಡೂ ಕಡೆಗಳ ಗುಂಪಿಗೂ ಘರ್ಷಣೆಯಾಗತಕ್ಕಂಥ ಪ್ರಮೇಯ ಬರುತ್ತದೆ. ವೈಸ್ ಛಾನ್ಸಲರನ್ನು ತ್ರೈಟನ್ ಮಾಡುತ್ತಾ ಇದ್ದಾರೆ. ಇದರ ಹಿಂದೆ ಪ್ರಮುಖವಾದ ಪಾತ್ರವನ್ನು ವಹಿಸುತ್ತಿರುವ ಮದನ ಗೋಪಾಲ್ ಅವರ ತಂದೆಯವರು ಸಿಂಡಿಕೇಟ್ ಮೆಂಬರ್ ಆಗಿರುತ್ತಾರೆ, ಅವರ ತಾಯಿಯವರು, ಸೆನೆಟ್ ಸದಸ್ಯರಾಗಿರುತ್ತಾರೆ. ಈ ಹಿತಾಸಕ್ತಿಗಳಿಂದ ವಿಶ್ವವಿದ್ಯಾನಿಲಯದ ಶಾಂತಿಗೆ ಭಂಗ ಉಂಟಾಗುವುದಲ್ಲದೆ, ವಿಶ್ವವಿದ್ಯಾನಿಲಯವನ್ನು ಹಾಳುಮಾಡುವ ಸಂಭವ ಉಂಟಾಗುತ್ತದೆ. ಇದು ಜನತಾಪಕ್ಷದ ಪ್ರಶ್ನೆಯಲ್ಲ, ಕಾಂಗ್ರೆಸ್ ಪಕ್ಷದ ಪ್ರಶ್ನೆಯೂ ಅಲ್ಲ. ಇದು ವಿಶ್ವವಿದ್ಯಾನಿಲಯದ ಪ್ರಶ್ನೆಯಾಗಿರುತ್ತದೆ. ಆದ್ದರಿಂದ ಈವತ್ತಿನದಿವಸ ಈ ಪ್ರಶ್ನೆಯನ್ನು ನಿಲುವಳಿ ಸೂಚನೆಯಾಗಿ ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. If it is otherwise, I request the Hon'ble. Education Minister to make a s atement today itself because of the urgency. The Syndicate is also meeting today. ಈವತ್ತು ಸಿಂಡಿಕೇಟ್ ಸಭೆ ಸೇರುತ್ತಾ ಇದೆ. ಇದರಲ್ಲಿ ಅವರು ತೆಗೆದುಕೊಂಡಿರತಕ್ಕಂಥ ತೀರ್ಮಾನವೇ ಸರಿ ಎಂದು ಹೇಳುವುದಾದರೆ ಇಡೀ ಕರ್ನಾಟಕದಲ್ಲಿಯೇ ಗೊಂದಲ ಉಂಟಾಗುವ ಸಂಭವ ಉಂಟಾಗುತ್ತದೆಂದು ಹೇಳಿ ಒಂದು ಸ್ಟೇಟ್‌ಮೆಂಟ್‌ಮಾಡಿ ಬೆಂಗಳೂರು ವಿಶ್ವವಿದ್ಯಾನಿಲಯದ ಕೀರ್ತಿಯನ್ನು ಕಾಪಾಡಬೇಕೆಂದು ತಮ್ಮ ಮುಖಾಂತರ ಮಾನ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ವೆಂಕಟಪ್ಪ.—ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಮುಂಚಿತವಾಗಿ ಈ ಒಂದು ಘಟನೆ ಯಾವಾಗ ನಡೆಯಿತು ಎಂಬುದರ ಬಗ್ಗೆ ಹೇಳುವುದಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಅದನ್ನು ತಿಳಿಸುತ್ತಾರೆ.

† ಶ್ರೀ ಬಿ. ಸುಬ್ಬಯ್ಯಶೆಟ್ಟಿ (ವಿದ್ಯಾಶಾಖೆಯ ಮಂತ್ರಿಗಳು). —ಮಾನ್ಯ ಸದಸ್ಯರಾದ ಮಳ್ಳೂರು ಆನಂದರಾಯರು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದಾರೆ. ಇದರಲ್ಲಿ ಈ ರೀತಿ ಹೇಳಿದ್ದಾರೆ. ''ಎಂ. ಎ. ಆರ್ಥಿಕ ಪರೀಕ್ಷೆಯಲ್ಲಿ ಮಾಲ್ ಪ್ರಾಕ್ಟೀಸ್ ಮಾಡಿದಂಥ ವಿದ್ಯಾರ್ಥಿಗಳನ್ನು ಕ್ಷಮಿಸಿ ಅವರನ್ನು ಉತ್ತೀರ್ಣರಾಗುವಂತೆ ಬೆಂಗಳೂರು ಯೂನಿವರ್ಸಿಟಿ ಸಿಂಡಿಕೇಟ್ ನಿರ್ಣಯವನ್ನು ತೆಗೆದುಕೊಂಡಿರುವ ಕಾರಣದಿಂದಾಗಿ ದಿನಾಂಕ ೧೬-೩-೧೯೭೮ರಂದು ಉಂಟಾದ ಗಲಭೆಯಿಂದ ಪಿಠೋಪಕರಣಗಳಿಗೆ ನಷ್ಟ ಉಂಟಾಗಿರುವುದಲ್ಲದೆ, ವಿಶ್ವವಿದ್ಯಾನಿಲಯದ ಶಾಂತಿಗೆ ಭಂಗವುಂಟಾಗಿದೆ''ಯೆಂದು ವಿಷಯವನ್ನು ಮಂಡಿಸಿದ್ದಾರೆ. ಮಾನ್ಯ ಸದಸ್ಯರು ಹೇಳಿದಹಾಗೆ ೧೯೭೪ನೇ ಇಸವಿಯಲ್ಲಿ ಕೆಲವೊಂದು ವಿದ್ಯಾರ್ಥಿಗಳು ಮಾಲ್ ಪ್ರಾಕ್ಟೀಸ್ ಮಾಡಿದ್ದಾರೆಂಬ ವಿಷಯ ತಿಳಿದುಬಂದಾಗ ಅದಕ್ಕೆ ಒಂದು ಕಮಿಟಿಯನ್ನು ರಚನೆ ಮಾಡಿತ್ತು. ಕಮಿಟಿಯವರು ಅದರ ಬಗ್ಗೆ ಕೂಲಂಕುಶವಾಗಿ ಪರೀಕ್ಷೆಮಾಡಿ ಒಂದು ರಿಪೋರ್ಟನ್ನು ಕೊಟ್ಟಿತ್ತು. ಆ ರಿಪೋರ್ಟ್ ಪ್ರಕಾರ ೮ನೇ ತಾರೀಖಿನಗಳ ಸಿಂಡಿಕೇಟ್‌ನಲ್ಲಿ ಚರ್ಚೆಯಾಗಿ ಬಹುಮತದಿಂದ ಒಂದು ನಿರ್ಣಯವನ್ನು ತೆಗೆದುಕೊಂಡಂಥ ವಿಚಾರ ತಿಳಿದುಬಂದಿರುತ್ತದೆ. ಆದರೂ ಕೂಡ ಯೂನಿವರ್ಸಿಟಿಯ ಆಕ್ಟ್‌ನಲ್ಲಿ ಏನು ಮಿನಿಟ್ಸ್ ತೆಗೆದುಕೊಳ್ಳುತ್ತಾರೆ, ಆ ಮಿನಿಟ್ಸ್ ಕಾಪಿಯನ್ನು ಸರ್ಕಾರಕ್ಕೂ ಕಳುಹಿಸಿಕೊಡಬೇಕೆಂದು ಒಂದು ಕಾನೂನು ಇರುತ್ತದೆ. ಅದನ್ನು ಮಾಡಬೇಕಾಗಿತ್ತು ಎನ್ನುವುದೇ ಈಗಿನ ಪರಿಸ್ಥಿತಿ. ಸರ್ಕಾರದ ಅಭಿಪ್ರಾಯ ಏನು ಇದೆ ಎಂದರೆ ಶಾಲಾಕಾಲೇಜುಗಳಲ್ಲಿ, ಯೂನಿವರ್ಸಿಟಿಗಳಲ್ಲಿ ಪದವಿಯನ್ನು ಕೊಡುವಾಗ ಯಾವ ಒಂದು ತಾರತಮ್ಯವಿಲ್ಲದೆ ನಡೆದುಕೊಳ್ಳಬೇಕು ಎನ್ನುವುದನ್ನು ವ್ಯಕ್ತಪಡಿಸಿದ್ದಾರೆ. ಆದರಲ್ಲಿ ಏನೂ ಭಿನ್ನಾಭಿಪ್ರಾಯವಿಲ್ಲ. ಇಡೀ ಸಭೆಯಲ್ಲಿ ಈ ಒಂದು ಉದ್ದೇಶಕ್ಕೆ ಭಿನ್ನಾಭಿಪ್ರಾಯವಿಲ್ಲವೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಕಾನೂನು ಪ್ರಕಾರ ಸಿಂಡಿಕೇಟ್ ಏನು ಒಂದು ನಿರ್ಣಯವನ್ನು ತೆಗೆದುಕೊಂಡರೂ ಸೆಕ್ಷನ್ ೮ ಕ್ಲಾಸ್ ೮ ರ ಪ್ರಕಾರ ''Notwithstanding anything in the preceding sub-section the State Government may by an order publish in the official Gazette, any annual proceedings of the University which in its opinion is not in conformity with this Act, the statute or Ordinance'' ಎಂದು ಇರುತ್ತದೆ, ಶ್ರೀ ರಾಮ್‌ದೇವ್‌ರವರು ಸಂಬಂಧಪಟ್ಟವರನ್ನು ಕರೆಸಿ ಅವರಿಗೆ ಸೂಕ್ತವಾದ ಡೈರೆಕ್ಷನ್ ಕೊಡಬೇಕೆಂದು ಹೇಳುತ್ತಿರುತ್ತಾರೆ. ಆದರೆ ಅವರಿಗೆ ಡೈರೆಕ್ಷನ್ ಕೊಡುವುದಕ್ಕೆ ಸರ್ಕಾರಕ್ಕೆ ಅಧಿಕಾರವಿಲ್ಲ. ಈವತ್ತು ಪುನಃ ಒಂದು ಸಭೆಯನ್ನು ಸೇರುವವರಿದ್ದಾರೆಂದು ತಿಳಿದು ಬಂದಿರುತ್ತದೆ. ಅಲ್ಲಿ ಏನು ನಡೆಯುತ್ತದೆ ಎನ್ನುವುದನ್ನು ಗಮನಿಸುತ್ತೇವೆಂದು ಅಧ್ಯಕ್ಷರ ಮೂಲಕ ಸೂಚಿಸುಯಸುತ್ತೇನೆ.

ಶ್ರೀ ಮಳ್ಳೂರ್ ಆನಂದರಾವ್. - ವಿದ್ಯಾಮಂತ್ರಿಗಳಿಗೆ ಅಧಿಕಾರ ಇದೆ. ಅಧಿಕಾರ ಇಲ್ಲ ಅಂತ ಸುಮ್ಮನೆ ಕೈಕಟ್ಟಿಕೊಂಡು ಕುಳಿತುಕೊಳ್ಳಬೇಡಿ. ನೀವು ದಯವಿಟ್ಟು ಇಂಟರ್‌ವೀನ್ ಆಗಿ.

೧-೩೦ ಪಿ. ಎಂ.

ಶ್ರೀ ಬಿ. ಸುಬ್ಬಯ್ಯಶೆಟ್ಟಿ. - ಕಾನೂನು ಪ್ರಕಾರ ಇಂಟರ್‌ವೀನ್ ಆಗಬೇಕೆಂಬೊರತು ಕಾನೂನನ್ನು ಬಿಟ್ಟು ಇಂಟರ್‌ವೀನ್ ಆಗುವುದಕ್ಕೆ ನನಗೆ ಆಗುವುದಿಲ್ಲ. ಕಾನೂನು ಪ್ರಕಾರ ಏನೆಲ್ಲಾ ಮಾಡುವುದಿದೆ ಅದನ್ನು ಖಂಡಿತವಾಗಿ ಮಾಡುತ್ತೇನೆ ಎಂಬ ಭರವಸೆಯನ್ನು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಸಭೆಗೆ ಕೊಡುವವನಿದ್ದೇನೆ. ಈಗ ಶಾಂತಿ ಭಂಗ ಆಗಿದೆ ಎಂದು ಏನು ತಿಳಿಸಿದ್ದೀರಿ ಆ ಬಗ್ಗೆ ಹೇಳಬೇಕಾದರೆ ಶಾಂತಿ ಭಂಗ ಮಾಡುವಂತಾದ್ದು ಸರಿಯಲ್ಲ, ಶಾಂತಿ ಭಂಗ ಮಾಡಬಾರದು, ಇದಕ್ಕೆ ಯಾರೂ ಕೂಡ ಪ್ರಚೋದನೆ ಕೊಡಬಾರದು ಎಂಬ ವಿಚಾರವನ್ನು ತಮ್ಮ ಮೂಲಕ ಹೇಳುವವನಿದ್ದೇನೆ. ಈಗ ಏನೋಂದು ಕೆಲಸ ನಡೆಯುತ್ತಿದೆ ಇದನ್ನು ಸರಿಪಡಿಸುವುದಕ್ಕೆ ಸಾಧ್ಯವಿದೆ. ಸೂಕ್ತ ರೀತಿಯಲ್ಲಿ ಸರಿಪಡಿಸುವುದಕ್ಕೆ ನಮಗೆ ಸಾಧ್ಯವಿದೆ. ಹೀಗಿರುವಾಗ ಶಾಂತಿ ಭಂಗ ಮಾಡಿ ಇಂದೇ ನಮ್ಮ ನಾಗರೀಕರನ್ನೇ ಒಂದು ಕಷ್ಟಕ್ಕೆ ಒಳಪಡಿಸುವುದು ಸರಿಯಲ್ಲ, ಆದ್ದರಿಂದ ಶಾಂತಿ ಭಂಗ ಆಗದಹಾಗೆ ನಮ್ಮ ಎಲ್ಲ ಸದಸ್ಯರೂ ಕೂಡ ಪ್ರಯತ್ನ ಪಡಬೇಕು ಎಂಬ ವಿನಂತಿಯನ್ನು ನಾನು ತಮ್ಮ ಮೂಲಕ ಮಾಡಿ

ಕೊಳ್ಳುವವನಿದ್ದೇನೆ. ಈಗ ಮಾನ್ಯ ಸದಸ್ಯರು ಏನು ನಿಲುವಳಿ ಸೂಚನೆಯನ್ನು ಕಳಿಸಿದ್ದಾರೆ ಅದಕ್ಕೆ ಅಷ್ಟೊಂದು ಫೋರ್ಸ್ ಇಲ್ಲ ಎಂದು ನಾನು ಹೇಳುತ್ತಿದ್ದೇನೆ. ಏಕೆಂದರೆ ಅದು ಅರ್ಜೆಂಟ್ ಪಬ್ಲಿಕ್ ಇಂಪಾರ್ಟನ್ಸ್ ಆಗುವುದಿಲ್ಲ. According to the motion itself, the incident has occurred on 16-3-78. To-day, it is 20th. After 16-3-78, the Assembly had assembled here. So, my humble submission is that on 20th this cannot be called a matter of urgent public importance and hence, this cannot be admitted as an Adjournment Motion.

SRI P. RAMDEV.—Point of order Sir. ನಿಲುವಳಿ ಸೂಚನೆ ಬಗ್ಗೆ ಅದು ೧೬ನೇ ತಾರೀಖು ನಡೆದಿರುವುದು, ಇವತ್ತು ೨೦ನೇ ತಾರೀಖು ಆಗಿದೆ, ಆದಕಾರಣ ಅದನ್ನು ತೆಗೆದುಕೊಳ್ಳುವುದ ಕ್ಕಾಗುವುದಿಲ್ಲ, ಎಂದು ಮಾನ್ಯ ಸಚಿವರು ಹೇಳಿದರು. ಸೆಕ್ಷನ್ ೫೦ರಲ್ಲಿ 'ಇತ್ತೀಚೆಗೆ' ಎಂಬ ಶಬ್ದ ಇದೆ. ಇತ್ತೀಚೆಗೆ ಎಂದು ಹೇಳಿದರೆ ಇವತ್ತು ಎಂದಲ್ಲ. ನಿನ್ನೆ ಆಗಿರಬೇಕು, ಇವತ್ತು ಬೆಳಿಗೆ ಆಗಿರಬೇಕು ಎಂಬ ಅರ್ಥ ಅಲ್ಲ. ಎರಡನೆಯದಾಗಿ ಸರ್ಕಾರದವರು ಇದರಲ್ಲಿ ಇಂಟರ್‌ಫಿಯರ್ ಮಾಡಬೇಕು ಎಂದು ಒತ್ತಾಯ ಮಾಡುತ್ತಿದ್ದೇನೆ. ನಾಳೆ ದಿವಸ ಗಲಾಟೆಯಾಗುತ್ತದೆ. ಅಲ್ಲಿ ಸರ್ಕಾರದ ಪ್ರತಿನಿಧಿಗಳು ಯಾರಾಗಿದ್ದಾರೆ ಟೆಕ್ನಿಕಲ್ ಎಜುಕೇಷನ್ ಡೈರೆಕ್ಟರ್, ಕೊಲೆಜಿಯೇಟ್ ಎಜುಕೇಷನ್ ಡೈರೆಕ್ಟರ್, ಸರ್ಕಾರದಿಂದ ನೇಮಕವಾಗಿರತಕ್ಕ ಸದಸ್ಯರು ಇವರೆಲ್ಲ ಸೇರಿ ಆ ತೀರ್ಮಾನ ಮಾಡಿರುವುದು.ಆ ತೀರ್ಮಾನ ದಿಂದ ವಿದ್ಯಾರ್ಥಿಗಳು ರೊಚ್ಚಿಗೆದ್ದಿದ್ದಾರೆ. ಮಾನ್ಯ ವಿದ್ಯಾ ಮಂತ್ರಿಗಳು ಈ ಬಗ್ಗೆ ವೈಸ್‌ಚಾನ್ಸಲರನ್ನು ಮತ್ತು ಸಂಬಂಧಪಟ್ಟವರನ್ನು ಕರೆಸಿ ಹೇಳಬೇಕು. ನಾಳೆ ದಿವಸ ಪೆಚ್ಚು ಗಲಾಟೆಯಾದರೆ ಯಾರಿಗೆ ಕಷ್ಟ ವಾಗುತ್ತದೆ. ಮುಂದೆ ಆಗತಕ್ಕ ಅನಾಹುತವನ್ನು ಈಗಲೇ ತಡೆಯಬೇಕು. ಈ ಗಲಾಟೆಯಿಂದ ಬೆಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಸಫರ್ ಮಾಡುತ್ತಿದ್ದಾರೆ. ಪರೀಕ್ಷೆಗೆ ಧಕ್ಕೆಯಾಗುತ್ತ ದೆಂಬ ದೃಷ್ಟಿಯಿಂದ ಪೋಷಕರೂ ಕೂಡ ಇದರ ಬಗ್ಗೆ ಸಾಕಷ್ಟು ತಲೆ ಕೆಡಿಸಿಕೊಂಡಿದ್ದಾರೆ. ಆದ್ದರಿಂದ ಈ ವಿಷಯ ಬಹಳ ತುರ್ತಾಗಿರುವುದರಿಂದ ಅಡ್ಜರ್ನಮೆಂಟ್ ಮೋಷನ್ ತಂದಿದ್ದೇವೆ. ಇಂಥ ಒಂದು ಜವಾಬ್ದಾರಿಯುತವಾದ ಸಭೆ ಈ ಬಗ್ಗೆ ಗಮನ ಕೊಡದೇಹೋದರೆ ಇನ್ಯಾರು ಕೊಡಬೇಕು. ಶಾಂತಿ ಭಂಗವಾದಮೇಲೆ ಆ ಬಗ್ಗೆ ಗಮನ ಕೊಡುವುದು ಸರಿಹೋಗುವುದಿಲ್ಲ ಎಂದು ಹೇಳುತ್ತಿದ್ದೇನೆ. ತಜ್ಞರ ಕಮೀರ್ಟಿಗೆ ಸಿಂಡಿಕೇಟ್ ಕೂಡ ವಿರೋಧವಾಗಿದೆ. ಎಲ್ಲ ಪತ್ರಿಕೆಗಳು ಲೇಖನಗಳನ್ನು ಬರೆದಿವೆ. ಇಷ್ಟೆಲ್ಲಾ ಇರುವಾಗ ಸರ್ಕಾರದವರು ಕಣ್ಣುಮುಚ್ಚಿಕೊಂಡು ಕುಳಿತುಕೊಂಡು ಆಮೇಲೆ ನೋಡುತ್ತೇವೆ ಎಂದು ಹೇಳಿದರೆ ಅದು ಸರಿಹೋಗುವುದಿಲ್ಲ, ನಾನು ಮಾನ್ಯ ವಿದ್ಯಾಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ತಾವು ತಕ್ಷಣ ಇಂಟರ್‌ಫಿಯರ್ ಆಗಬೇಕು. ಇವತ್ತು ಸಿಂಡಿಕೇಟ್ ಮೀಟಿಂಗ್ ಇದೆ. ಆದ್ದರಿಂದ ಮಾನ್ಯ ಮಂತ್ರಿಗಳು ಸಂಬಂಧಪಟ್ಟವರನ್ನು ಕರೆಸಿ ಹೇಳಬೇಕು. ಆ ರೀತಿ ಹೇಳಿದರೆ ತಪ್ಪಾಗುವುದಿಲ್ಲ. ಮುಂದೆ ಆಗತಕ್ಕ ಅನಾಹುತವನ್ನು ತಪ್ಪಿಸುವ ದೃಷ್ಟಿಯಿಂದ ಜವಾಬ್ದಾರಿಯುತ ಮುಂತ್ರಿಗಳು ತಕ್ಷಣ ಇಂಟರ್ ಫಿಯರ್ ಆಗಬೇಕು ಎಂದು ಇನ್ನೊಮ್ಮೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಸುಬ್ಬಯ್ಯಶೆಟ್ಟಿ. - ನಾನು ಇಷ್ಟು ಹೇಳಿದಮೇಲೂ ಸರ್ಕಾರ ಕಣ್ಣು ಮುಚ್ಚಿಕೊಂಡು ಕುಳಿತು ಕೊಂಡಿದೆ ಎಂದು ಹೇಳಿದ್ದು ದುರದೃಷ್ಟಕರ. ಸರ್ಕಾರಕ್ಕೂ ಕೂಡ ತಮಷ್ಟೇ ಕಳಕಳಿ ಇದೆ ಎಂದು ಹೇಳಿದ್ದೇನೆ. ಪ್ರತಿ ಸಲ ಶಾಂತಿ ಭಂಗ ಆಗುತ್ತದೆ, ಶಾಂತಿ ಭಂಗ ಆಗುತ್ತದೆ ಎಂದು ಹೇಳುವುದು ಬಹುಶಃ ಶಾಂತಿ ಭಂಗ ಆಗಬೇಕು ಎಂದು ಹೇಳಿದಹಾಗೆ ಕಾಣುತ್ತದೆ. ಸರ್ಕಾರ ಅದನ್ನು ಪರಿಶೀಲಿಸಿದೆ. ಅದರ ಬಗ್ಗೆ ಕಳಕಳಿಯಿಂದ ಇದೆ ಎಂದು ಹೇಳುವಾಗ ಶಾಂತಿ ಭಂಗವಾಗುತ್ತದೆ ಎಂದು ಹೇಳಿದರೆ ಅದು ಅಷ್ಟೊಂದು ಸರಿಕಾಣುವುದಿಲ್ಲ. ಶಾಂತಿ ಭಂಗ ಆಗಬಾರದು ಎಂಬುದಕ್ಕೆ ನಮ್ಮ ಪ್ರಯತ್ನ ಇರಬೇಕೇ ಹೊರತು ಶಾಂತಿ ಭಂಗ ಆಗಬೇಕು, ಶಾಂತಿ ಭಂಗ ಆದತಕ್ಷಣ ಇದೆಲ್ಲಾ ಪರಿಹಾರವಾಗುತ್ತದೆ ಎಂದು ನೆನೆ ಸಿಕೊಂಡರೆ ಅದು ತಪ್ಪು. ಇದು ಪರಿಹಾರವಾಗಬೇಕು, ಶಾಂತರೀತಿಯಿಂದ ಪರಿಹಾರವಾಗಬೇಕೇ ಹೊರತು ಶಾಂತಿ ಭಂಗದಿಂದಲ್ಲ. ಶಾಂತರೀತಿಯಿಂದಲೇ ಇದನ್ನು ಪರಿಹರಿಸುವುದಕ್ಕಾಗುತ್ತದೆ ಎಂಬುದನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ನಾನು ಹೇಳಬಯಸುತ್ತೇನೆ. ಮಾನ್ಯ ಸದಸ್ಯರು ಸಂಬಂಧಪಟ್ಟವರನ್ನು ಕರೆಸಿ ಹೇಳಿ ಎಂದು ಏನು ಹೇಳುತ್ತಿದ್ದಾರೆ, ಅದಕ್ಕೆ ಪ್ರಾವಿಷನ್ ಯೂನಿವರ್ಸಿಟಿ ಆಕ್ಟ್‌ನಲ್ಲಿ ಇಲ್ಲ ಒಂದು ವೇಳೆ ಅವಕಾಶವಿದ್ದರೆ ತಕ್ಷಣ ಕರೆಸಿ ಹೇಳುತ್ತೇನೆ ನನ್ನ ಅಭ್ಯಂತರ ಇಲ್ಲ.

ಶ್ರೀ ಸಿ. ಎಂ. ಇಬ್ರಾಹಿಂ.— ಪರಿಹಾರ ಯಾವಾಗ ಕಂಡುಹಿಡಿಯುತ್ತೀರಿ ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ. - ಇವತ್ತು ಪರಿಸ್ಥಿತಿ ಗೊತ್ತಾಗುತ್ತದೆ. ಪರಿಸ್ಥಿತಿ ಕೈಮೀರದ ಹಾಗೆ ನೋಡಿಕೊಳ್ಳುತ್ತೇವೆ ಎಂಬ ವಿಚಾರವನ್ನು ಹೇಳುತ್ತೇನೆ.

ಶ್ರೀ ಸಿ. ಎಂ. ಇಬ್ರಾಹಿಂ. —ಮಾನ್ಯ ಸಚಿವರು ಹೇಳಿದ್ದಕ್ಕೆ ತುಂಬಾ ಅಭಿನಂದಿಸಬೇಕಾಗುತ್ತದೆ. ತಾವು ಹೇಳಿದಿರಿ ಶಾಂತಿ ಭಂಗ ಆಗಬಾರದು ಎಂದು. ನಾವೂ ಕೂಡ ಶಾಂತಿ ಭಂಗ ಆಗಬಾರದು ಎಂಬ ದೃಷ್ಟಿಯಿಂದಲೇ ಆ ಸಮಸ್ಯೆಯನ್ನು ಎತ್ತುತ್ತಾ ಇರುವುದು ಶಾಂತಿ ಭಂಗ ಆಗಬೇಕು ಎಂದು ನಮ್ಮ ಇಚ್ಛೆಯಿದ್ದರೆ ನಾವು ಆ ಸಮಸ್ಯೆಯನ್ನು ಎತ್ತುತ್ತಾ ಇರಲಿಲ್ಲ, ಈಗ ಹೊಗೆ ಕಾಣುತ್ತಿದೆ, ಅದು ಉರಿದು ಬೆಂಕಿ ಹತ್ತಿಕೊಳ್ಳದ ಹಾಗೆ ನೋಡಿಕೊಳ್ಳಿ ಎಂದು ನಾವು ಹೇಳುತ್ತಿದ್ದೇವೆ. ಬೆಂಕಿ ಉರಿಸಬೇಕು ಎಂಬ ಇಚ್ಛೆ ನಮಗಿಲ್ಲ. ನಾಲ್ಕೈದು ದಿವಸದಿಂದ ಗಲಾಟೆ ನಡೆಯುತ್ತಿದೆ, ಬಹಶಃ ಈಗಾಗಲೇ ತಾವು ಸಂಬಂಧಪಟ್ಟವರನ್ನು ಕರೆಸಿ ಮಾತನಾಡಿದ್ದರೆ ನಾವು ಈ ಸಮಸ್ಯೆಯನ್ನು ಇಲ್ಲಿ ಎತ್ತುವ ಅವಶ್ಯಕತೆ ಇರಲಿಲ್ಲ. ನಾವು ಇನ್ನೂ ಐದು ವರ್ಷ ಇರುವವರು. ನಾವು ಆ ಕೆಲಸಕ್ಕೆ ಕೈಹಾಕುವುದಿಲ್ಲ. ವಿದ್ಯಾರ್ಥಿಗಳಿಗೆ ಅಸಮಾಧಾನ ಬರದೇ ಇರುವ ರೀತಿಯಲ್ಲಿ ನೋಡಿಕೊಳ್ಳಬೇಕು.

ಶ್ರೀ ಎಸ್. ವಿ.ನಾಯಕ್.—ಐದು ವರ್ಷದಲ್ಲಿ ಆ ಬೆಂಕಿಯಲ್ಲಿ ದಹಿಸಿಹೋಗುತ್ತೀರಿ.

ಶ್ರೀ ಪಿ. ರಾಂದೇವ್.— ಶಾಂತಿ ಭಂಗದ ದೃಷ್ಟಿಯಿಂದ ಮಾತನಾಡುತ್ತಿಲ್ಲ.

ಅಧ್ಯಕ್ಷರು. – ಮುಂದೆ ಏನಾದರೂ ಪರಿಣಾಮ ಆದೀತು ಎಂಬ ಭಯದಿಂದ ಎಚ್ಚರಿಕೆ ತೆಗೆದುಕೊಳ್ಳಬೇಕು ಎಂಬ ಉದ್ದೇಶದಿಂದ ತಾವು ಹೇಳಿದ್ದೀರಿ. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ.

ಶ್ರೀ ಪಿ. ರಾಂದೇವ್. – ೧೬ನೇ ತಾರೀಖು ವಿದ್ಯಾರ್ಥಿಗಳು ಯೂನಿವರ್ಸಿಟಿ ಬಸ್ ತೆಗೆದುಕೊಂಡು ಅದರಲ್ಲಿ ಒಂದು ಗೌನ್ಸರ್‌ಗೆ ಮೆಮೊರಾಂಡಂ ಕೊಟ್ಟಿದ್ದಾರೆ.

ಶ್ರೀ ಬಿ. ಸುಬ್ಬಯ್ಯಶೆಟ್ಟಿ. – ಮಾನ್ಯ ಸದಸ್ಯರು ಈ ಸಮಸ್ಯೆಯನ್ನು ಹೆಚ್ಚು ಎತ್ತುವುದು ಬೇಡ ಎಂದು ನನ್ನ ಒಂದು ಸಲಹೆ. ಏತಕ್ಕಿಂದರೆ ಅದರಲ್ಲಿ ಕೋರ್ಟ್ ಕೇಸ್‌ನಲ್ಲಿ ವಿಚಾರಣೆ ಆಗುವಂಥ ಸಮಸ್ಯೆ ಇದೆ. ವಿದ್ಯಾರ್ಥಿಗಳು ಏನು ಎತ್ತಿಕೊಂಡು ಹೋಗಿದ್ದಾರೆ, ಅದು ಎತ್ತಿಕೊಂಡು ಹೋಗಿದ್ದಾರೋ ಇಲ್ಲವೋ ಎಂಬ ಪ್ರಶ್ನೆ ಇರುವಾಗ ಅಂಥ ವಿಷಯದಲ್ಲಿ ಅವರು ಎತ್ತಿಕೊಂಡು ಹೋಗಿದ್ದಾರೆ ಎಂದು ಹೇಳಿದರೆ ಕೇಸನ್ನು ಪ್ರಿಜೂಡ್ಯೂಸ್ ಮಾಡಿದಂತಾಗುವ ಸಂದರ್ಭ ಬಂದೀತು. ಆದ್ದರಿಂದ ಆ ಬಗ್ಗೆ ಹೆಚ್ಚು ಸ್ಟೇಟ್‌ಮೆಂಟ್ ಮಾಡುವುದು ಸರಿಯಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.— ಇದರಲ್ಲಿ ಸರ್ಕಾರದವರದೂ ಜವಾಬ್ದಾರಿ ಇದೆ, ನಮ್ಮದೂ ಇದೆ. ನನ್ನ ಒಂದು ಸಲಹೆ ಏನೆಂದರೆ ಈಗ ಕೊಟ್ಟಿರತಕ್ಕ ಅಡ್ಜರ್ನ್‌ಮೆಂಟ್ ಮೋಷನ್ನನ್ನು ಕಾಲ್ ಅಟೆನ್‌ಷನ್ ನೋಟೀಸಾಗಿ ಪರಿವರ್ತನೆ ಮಾಡಿ. ಸರ್ಕಾರದವರು ಎರಡು ದಿವಸದಲ್ಲಿ ಉತ್ತರ ಕೊಡಲಿ. I request the Chair to convert it to Call Attention Notice get detailed information and inform the House.

MR. SPEAKER.—I agree to the Hon'ble Member's suggestion. Mr. Ramdev, may give a Call Attention Notice. I will refer it to the Minister.

ಶ್ರೀ ಕೆ. ವೆಂಕಟಪ್ಪ.- ನಾನು ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ನೋಟೀಸ್ ಕಳುಹಿಸಿದ್ದೆ. ಇದು ಕುಡಿಯುವ ನೀರಿನ ವಿಷಯ ಆಗಿರುವುದರಿಂದ ಆದಷ್ಟು ಬೇಗ ಉತ್ತರ ಕೊಡಿಸಿ, ೭-೮ ದಿವಸದಿಂದ ಅವರು.....

MR. SPEAKAR.— I know the Hon'ble Member's anxiety I will do the needful. He may sit down. ಅದು ಸಂಬಂಧಪಟ್ಟ ಮಂತ್ರಿಗಳಿಗೆ ಹೋಗಿದೆ. ಅವರು ಇನ ಫರ್ಮೇಷನ್ ತರಿಸಿದ ನಂತರ ಸಭೆ ಮುಂದೆ ಆ ವಿಷಯ ಬರುತ್ತೆ. ಸಂಬಂಧಪಟ್ಟ ಮಂತ್ರಿಗಳ ಹತ್ತಿರ ಮಾತನಾಡುತ್ತೇನೆ ಎಂದು ಹೇಳಿದ್ದೇನೆ. ಮತ್ತೆ ಯಾತಕ್ಕೆ ಅದನು ಪ್ರಸ್ತಾಪ ಮಾಡುತ್ತೀರಿ?